**ಇಂದು ದಿನಾಂಕಃ 23-09-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ದಾವಾ ಆಸ್ತಿಯನ್ನು ಖರೀದಿ ಮಾಡಿದ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಾವಾ ಆಸ್ತಿ ಯಾವುದೆ ಖರೀದಿ ಪತ್ರ ಇಲ್ಲದೇ ಇರುವ ಕಾರಣ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೂ ಮಾರಾಟ ಮಾಡಿದ ಪೂರ್ವ ಮಾಲೀಕರಿಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಗೂ ಮತು ನನಗೆ ಮಾಡಿದ ಪೂರ್ವ ಮಾಲೀಕರ ಆಸ್ತಿಯ ಮಧ್ಯದಲ್ಲಿ 3 ಫೀಟ 4 ಇಂಚು ಸಂದಿ ಇತ್ತು ಎಂದರೆ ಸಾಕ್ಷಿ ಗೋಡೆ ಇತ್ತು ಎಂದು ನುಡಿಯುತ್ತಾರೆ. ಈ ದಾವೆಯಲಿ ಮಧ್ಯಂತರ ಆದೇಶ ಬಂದ ನಂತರ ನಾನು ಗೋಡೆಯನ್ನು ತೆರವು ಗೊಳಿಸಿ ಸಂದಿಯನ್ನು ಅತಿಕ್ರಮಣ ಪಡಿಸಿ ಕಟ್ಟಡ ನಿರ್ಮಾಣ ಮಾಡಿದ್ದೇನೆ ಎಂದರೆ ಸಾಕ್ಷಿ ದಾವೆ ಸಲಿಸುವ ಮೊದಲೇ ಕಟ್ಟಡ ನಿರ್ಮಾಣ ಆಗಿತ್ತು ಎಂದು ನುಡಿಯುತ್ತಾರೆ.

ಈಗ ನೋಡುತ್ತಿರುವ ನಾನು ಸಲ್ಲಿಸಿದ ಜೆರಾಕ್ಸ ಇ ಆಸ್ತಿ ಪ್ರತಿಯಲ್ಲಿ ನನ್ನ ಹೆಂಡತಿಯ ಭಾವಚಿತ್ರ ಇದೆ. ಸದರಿ ಇ ಆಸ್ತಿ ದಾಖಲೆಯ ಜೆರಾಕ್ಸ ಪ್ರತಿಯನ್ನು ನಿಪಿ-8 ಎಂದು ಗುರುತಿಸಲಾಯಿತು. ವಾದಿ ಆಸ್ತಿ ಮತ್ತು ನನ್ನ ಆಸ್ತಿ ಮಧ್ಯದಲ್ಲಿ ಕಾಮನ ಗೋಡೆ ಇತ್ತು. ನಿಪಿ-8 ರಲ್ಲಿ ನನ್ನ ಆಸ್ತಿ ಮತ್ತು ವಾದಿ ಆಸ್ತಿ ಮಧ್ಯದಲ್ಲಿ ಕಾಮನ ಗೊಡೆ ಇರುವ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ನನ್ನ ಮನೆಯ ಉತ್ತರ ದಿಕ್ಕಿಗೆ ಒಂದು ಸಂದಿ ಇದ್ದು ಆದ ನಂತರ ನೂರುದ್ದೀನ ರವರ ಮನೆ ಇದೆಯೆಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ನಿಡಿ-5 ರ ದಾಖಲೆಯಲ್ಲಿ ಉತ್ತರ ದಿಕ್ಕಿಗೆ ಯಾವುದೇ ಸಂದಿ ತೋರಿಸಿಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸದರಿ ಸಂದಿ 3 ಫೀಟ 4 ಇಂಚು ಅಳತೆಯದ್ದು ಆಗಿರುತ್ತದೆ ಎಂದರೆ ಸಾಕ್ಷಿ 2 ಫೀಟಿನ ಸಂದಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸದರಿ ಸಂದಿಯನ್ನು 1 ಫೀಟ 4 ಇಂಚುನಷ್ಟು ಅತಿಕ್ರಮಣ ಮಾಡಿದ ಕಾರಣ 2 ಫೀಟ ಇದೆ ಎಂದು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಅಲ್ಲಿ 3 ಫೀಟ 4 ಇಂಚುನ ಸಂದಿ ಇತ್ತು ಎಂದು ನನಗೆ ಮತ್ತು ನನ್ನ ತಂದೆಗೂ ಸಹ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಸಂದಿಯ ಅಳತೆ 3 ಫೀಟ 4 ಇಂಚು ಇರುವ ಬಗ್ಗೆ 1993 ರಲ್ಲಿ ಪಂಚನಾಮೆ ಮಾಡಿದ್ದು ಅದರಲ್ಲಿ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಬ್ಬಾಸ ಅಲಿ ತಂದೆ ಮೊಹ್ಮದ ತಾಜೋದ್ದೀನ ನನ್ನ ತಂದೆ ಎಂದರೆ ಸರಿ.

ನಾನು ಜಮೀನು ಪಡೆದ ನನ್ನ ಪೂರ್ವ ಮಾಲೀಕರ ತಂದೆ ಹೆಸರು ಅಬ್ದುಲ ಮಜೀದ ಎಂದರೆ ಸರಿ. ನಾನು ಇದ್ದ ಮನೆ ಮೊದಲು ಅಬ್ದುಲ ಮಜೀದ ರವರಿಗೆ ಸಂಬಂಧಪಟ್ಟಿತ್ತು ಎಂದರೆ ಸರಿ. ದಿನಾಂಕಃ 12-04-1993 ರಂದು ಅಬ್ದುಲ ಮಜೀದ ರವರು ಮನೆ ಕಟ್ಟಡಕ್ಕಾಗಿ ಪರವಾನಿಗೆ ಕೇಳಿದ್ದರು ಎಂದರೆ ಸರಿ. ಅಬ್ದುಲ ಮಜೀದ ರವರಿಗೆ ತಮ್ಮ ಆಸ್ತಿಯ ವಿಸ್ತೀರ್ಣ ಮತ್ತು ಚೆಕ್ಕು ಬಂದಿ ಗೊತ್ತಿತ್ತು ಎಂದರೆ ಸರಿ. 1993 ರಲ್ಲಿ ತನ್ನ ಆಸ್ತಿಯ ನಕಾಶೆಯನ್ನು ಅಬ್ದುಲ ಮಜೀದ ರವರು ಪುರಸಭೆಗೆ ನಿಡಿದ್ದು ಆಗ ಕಟ್ಟಡ ರಚನೆಗಾಗಿ ಪರವಾನಿಗೆ ಸಹ

ಅಧಿಕಾರಿಗಳು ನೀಡಿದ್ದರು ಎಂದರೆ ಸರಿ. ಅಬ್ದುಲ ಮಜೀದ ರವರು ತಮ್ಮ ವಿಸ್ತೀರ್ಣದ ಆಸ್ತಿಯನ್ನು ನಮಗೆ ನೀಡಿದ್ದಾರೆ ಎಂದರೆ ಸರಿ. ಅಬ್ದುಲ ಮಜೀದ ರವರು ತಮ್ಮ ಆಸ್ತಿ ವಿಸ್ತೀರ್ಣ ಉತ್ತರದಿಂದ ದಕ್ಷಿಣಕೆ 15 ಅಡಿ ಮತು ಪೂರ್ವದಿಂದ ಪಶ್ಚಿಮಕ್ಕೆ 10 ಅಡಿ ಎಂದು ಉಲ್ಲೇಖಿಸಿದ್ದಾನೆ ಎಂದರೆ ಸಾಕ್ಷಿ 20 X 20 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಅಬ್ದುಲ ಮಜೀದಿಗೆ ಸೇರಿದ ಆಸ್ತಿ ವಿಸ್ತೀರ್ಣ 20 X 20 ಅಡಿ ಇತ್ತು ಎಂದು ತೋರಿಸಲು ಯಾವುದೇ ದಾಖಲೇ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ-5 ಮತ್ತು ನಿಡಿ-1 ರಲ್ಲಿ 20 X 20 ಅಡಿ ಎಂದು ಉ ಲ್ಲೇಖಿಸಿರುವುದನ್ನು ದುರುಪಯೋಗಿಸಿ 1 ಫೀಟ 4 ಇಂಚಿನ ಸಂದಿಯನ್ನು ಅತಿಕ್ರಮಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿ ಉತ್ತರಕ್ಕೆ ಸಂದಿ ಇದ್ದರೂ ಸಹ ನಾವು ಅತಿಕ್ರಮಿಸಿದ ಕಾರಣ ಉತ್ತರಕ್ಕೆ ನೂರುದ್ದೀನ ರವರ ಮನೆ ಇದೆ ಎಂದು ನಿಡಿ-3 ರಲ್ಲಿ ತಪಾಗಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನಾನು ಅವರ ಸ್ಥಳವನ್ನು ಅತಿಕ್ರಮಿಸಿದ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ಕಟ್ಟಿರುವ ಗೋಡೆಯನ್ನು ತೆರವುಗೊಳಿಸಬೇಕಾಗುತ್ತದೆ ಎಂದು ತಿಳಿದು ಸುಳ್ಳು ಶಪಥ ಪತ್ರ ಸಲ್ಲಿಸಿ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**